ಬ್ರಹ್ಮಾತಂದೆಯ ಇನ್ನೆರಡು ಹೆಜ್ಜೆಗಳು- ಆದೇಶಪಾಲಕ-ವಿಧೇಯತೆ

ಇಂದು ಬಾಪ್ದಾದಾರವರು ನಾಲ್ಕಾರು ಕಡೆಯಲ್ಲಿರುವ ಸ್ನೇಹಿ ಹಾಗೂ ಸಹಯೋಗಿ ಮಕ್ಕಳನ್ನು ಹಾಗೂ ಶಕ್ತಿಶಾಲಿ ಸಮಾನ ಮಕ್ಕಳನ್ನು ನೋಡುತ್ತಿದ್ದಾರೆ. ಸ್ನೇಹಿಗಳು ಎಲ್ಲರೂ ಆಗಿದ್ದಾರೆ ಆದರೆ ಯಥಾಶಕ್ತಿ ಶಕ್ತಿಶಾಲಿಗಳಿದ್ದಾರೆ. ಸ್ನೇಹಿ ಮಕ್ಕಳ ಸ್ನೇಹದ ರಿಟರ್ನ್ ಪದಮಪಟ್ಟು ಸ್ನೇಹ ಹಾಗೂ ಸಹಯೋಗವು ಪ್ರಾಪ್ತಿಯಾಗುತ್ತದೆ. ಶಕ್ತಿಶಾಲಿ ಸಮಾನರಾದ ಮಕ್ಕಳು ಸದಾ ಸಹಜ ವಿಜಯಿ ಭವದ ರಿಟರ್ನ್ ಲಭಿಸುತ್ತದೆ. ರಿಟರ್ನ್ಂತು ಎಲ್ಲರಿಗೂ ಲಭ್ಯವಾಗುತ್ತದೆ. ಸ್ನೇಹಿ ಮಕ್ಕಳು ಯಥಾಶಕ್ತಿ ಶಕ್ತಿಶಾಲಿ ಆಗಿರುವ ಕಾರಣದಿಂದ ಸದಾ ಸಹಜ ವಿಜಯದ ಅನುಭವ ಮಾಡುವುದಕ್ಕಾಗುವುದಿಲ್ಲ. ಕೆಲವೊಮ್ಮೆ ಸಹಜ, ಕೆಲವೊಮ್ಮೆ ಪರಿಶ್ರಮವೆನಿಸುತ್ತದೆ. ಇಂತಹ ಸ್ನೇಹಿ ಮಕ್ಕಳ ಪರಿಶ್ರಮವನ್ನೂ ಸಹ ಬಾಪ್ದಾದಾರವರು ಸಹಜ ಮಾಡುವ ಸಹಯೋಗವನ್ನು ಕೊಡುತ್ತಾರೆ ಏಕೆಂದರೆ ಸ್ನೇಹಿ ಆತ್ಮರು ಸಹಯೋಗಿಗಳಾಗಿಯೂ ಇರುತ್ತಾರೆ. ಹಾಗಾದರೆ ಸಹಯೋಗದ ರಿಟರ್ನ್ಲ್ಲಿ ಬಾಪ್ದಾದಾರವರು ಖಂಡಿತವಾಗಿ ಸಹಯೋಗವನ್ನು ಕೊಡುತ್ತಾರೆ ಆದರೆ ಯಥಾರ್ಥ ಯೋಗವಿರದೇ ಇರುವ ಕಾರಣದಿಂದ ಸಹಯೋಗ ಲಭ್ಯವಾಗುತ್ತಿದ್ದರೂ ಪ್ರಾಪ್ತಿಯ ಅನುಭೂತಿ ಮಾಡುವುದಕ್ಕೆ ಆಗುವುದಿಲ್ಲ. ಯೋಗದ ಮೂಲಕವೇ ಸಹಯೋಗದ ಅನುಭೂತಿಯಾಗುವುದು ಹಾಗೂ ಶಕ್ತಿಶಾಲಿ ಸಮಾನವಿರುವ ಮಕ್ಕಳು ಸದಾ ಯೋಗಯುಕ್ತವಾಗಿ ಇರುತ್ತಾರೆ ಆದ್ದರಿಂದಲೇ ಸಹಯೋಗದ ಅನುಭವ ಮಾಡುತ್ತಾ ಸಹಜ ವಿಜಯಿಗಳಾಗಿಬಿಡುತ್ತಾರೆ. ಆದರೆ ತಂದೆಯವರಿಗೆ ಎರಡೂ ಪ್ರಕಾರದ ಮಕ್ಕಳು ಪ್ರಿಯವಾಗಿರುತ್ತಾರೆ. ಪ್ರೀತಿ ಹಾಗೂ ಸದಾ ವಿಜಯಿಯಾಗಿರುವ ಶುಭ ಇಚ್ಛೆಯಂತು ಎಲ್ಲಾ ಮಕ್ಕಳಲ್ಲಿಯೂ ಇರುತ್ತದೆ ಆದರೆ ಶಕ್ತಿಯು ಕಡಿಮೆಯಿರುವ ಕಾರಣದಿಂದ ಸಮಯದಲ್ಲಿ ಹಾಗೂ ಸರ್ವಶಕ್ತಿಗಳನ್ನು ಕಾರ್ಯದಲ್ಲಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ತಂದೆಯು ಆಸ್ತಿಯ ಅಧಿಕಾರದಲ್ಲಿ ಸರ್ವಶಕ್ತಿಗಳ ಅಧಿಕಾರವನ್ನು ಎಲ್ಲಾ ಮಕ್ಕಳಿಗೂ ಕೊಡುತ್ತಾರೆ. ಅಧಿಕಾರವನ್ನು ಕೊಡುವುದರಲ್ಲಿ ಬಾಪ್ದಾದಾರವರು ಅಂತರವನ್ನಿಡುವುದಿಲ್ಲ, ಎಲ್ಲರಿಗೂ ಸಂಪೂರ್ಣ ಅಧಿಕಾರಿಯನ್ನಾಗಿ ಮಾಡುತ್ತಾರೆ ಆದರೆ ಅದನ್ನು ತೆಗೆದುಕೊಳ್ಳುವುದರಲ್ಲಿ ನಂಬರ್ವಾರ್ ಆಗಿಬಿಡುತ್ತಾರೆ. ಬಾಪ್ದಾದಾರವರು ಕೆಲವರಿಗೆ ವಿಶೇಷ, ಕೆಲವರಿಗೆ ವಿಶೇಷವಾದ ಕ್ಲಾಸನ್ನು ತೆಗೆದುಕೊಳ್ಳುವರೇನು? ಕೊಡುವುದಿಲ್ಲ. ವಿದ್ಯಾಭ್ಯಾಸವೂ ಸರ್ವರಿಗೂ ಒಂದೇ, ಪಾಲನೆಯೂ ಸಹ ಎಲ್ಲರಿಗೂ ಒಂದೇ ಆಗಿರುತ್ತದೆ. ಪಾಂಡವರಿಗೆ ಬೇರೆ ಪಾಲನೆಯಾಗಿದ್ದು, ಶಕ್ತಿಯರಿಗೇ ಬೇರೆ ಪಾಲನೆಯನ್ನು ಕೊಡುವರೇನು? ಸರ್ವರಿಗೂ ಒಂದೇ ಪಾಲನೆ ಹಾಗೂ ಒಂದೇ ವಿದ್ಯಾಭ್ಯಾಸವಿದೆ ಆದರೆ ಅದನ್ನು ಸ್ವೀಕರಿಸುವುದರಲ್ಲಿ ಹಾಗೂ ಫಲಿತಾಂಶದಲ್ಲಿ ಎಷ್ಟೊಂದು ಅಂತರವಾಗಿಬಿಡುತ್ತದೆ! ಅಷ್ಟರತ್ನಗಳಲ್ಲಿ ಮತ್ತು 16108 ರತ್ನಗಳಲ್ಲಿ- ಎಷ್ಟೊಂದು ಅಂತರವಿದೆ! ಈ ಅಂತರವೇಕೆ ಆಗುವುದು? ವಿದ್ಯಾಭ್ಯಾಸ ಹಾಗೂ ಪಾಲನೆ, ವರದಾನವನ್ನು ಧಾರಣೆ ಮಾಡಿಕೊಳ್ಳುವುದು ಹಾಗೂ ಉಪಯೋಗ ಮಾಡುವುದರಲ್ಲಿ ಅಂತರವಾಗಿಬಿಡುತ್ತದೆ. ಹಲವು ಮಕ್ಕಳು ಧಾರಣೆಯನ್ನೂ ಮಾಡಿಕೊಳ್ಳುತ್ತಾರೆ ಆದರೆ ಸಮಯದಲ್ಲಿ ಕಾರ್ಯದಲ್ಲಿ ಉಪಯೋಗ ಮಾಡುವುದರಲ್ಲಿ ಬರುವುದಿಲ್ಲ. ಬುದ್ಧಿಯವರೆಗೂ ಬಹಳ ಸಂಪನ್ನವಾಗಿರುತ್ತಾರೆ ಆದರೆ ಕರ್ಮದಲ್ಲಿ ಉಪಯೋಗ ಮಾಡುವುದರಲ್ಲಿ ಅಂತರವಾಗಿಬಿಡುತ್ತದೆ.

ಬ್ರಹ್ಮಾ ತಂದೆಯವರೇಕೆ ನಂಬರ್ವನ್ ಆದರು? ಎರಡು ಹೆಜ್ಜೆಗಳನ್ನು ಮುಂಚೆಯೇ ತಿಳಿಸಿದ್ದೇವಲ್ಲವೆ. ಮೂರನೆಯ ಹೆಜ್ಜೆ- ಸದಾ ತಂದೆ, ಶಿಕ್ಷಕ ಹಾಗೂ ಸದ್ಗುರುವಿನ ಆದೇಶ ಪಾಲಕನಾದರು. ಪ್ರತೀ ಆದೇಶದಲ್ಲಿ ಆಯಿತು ಎಂದು ಮಾಡಿದರು. ತಂದೆಯ ಆದೇಶವಿದೆ- ಸದಾ ಸರ್ವ ಖಜಾನೆಗಳ ಆಸ್ತಿಯಲ್ಲಿ ಸಂಪನ್ನರು ಆಗುವುದು ಹಾಗೂ ಅನ್ಯರನ್ನೂ ಮಾಡುವುದು. ಹಾಗಾದರೆ ಪ್ರತ್ಯಕ್ಷದಲ್ಲಿ ನೋಡಿದಿರಿ- ಮೊದಲ ದಿನದಿಂದ ಅಂತಿಮ ದಿನದವರೆಗೂ ಸರ್ವ ಖಜಾನೆಗಳಾದ ಜ್ಞಾನ, ಶಕ್ತಿಗಳು, ಗುಣ, ಶ್ರೇಷ್ಠ ಸಮಯ, ಶ್ರೇಷ್ಠ ಸಂಕಲ್ಪಗಳ ಖಜಾನೆಯನ್ನು ಕಾರ್ಯದಲ್ಲಿ ಉಪಯೋಗಿಸಿದರು. ಅಂತಿಮ ದಿನವೂ ಸಹ ಸಮಯ, ಸಂಕಲ್ಪವನ್ನು ಮಕ್ಕಳಿಗಾಗಿ ಉಪಯೋಗಿಸಿದರು. ಜ್ಞಾನ ಖಜಾನೆ, ನೆನಪಿನ ಶಕ್ತಿ ಹಾಗೂ ಸಹನಶೀಲನತೆಯ ಗುಣದ ಸ್ವರೂಪ ಎಲ್ಲಾ ಖಜಾನೆಗಳನ್ನು ಅಂತಿಮ ಸಮಯದವರೆಗೂ, ಶರೀರವನ್ನೂ ಮರೆತು ಸೇವೆಯಲ್ಲಿ ಪ್ರತ್ಯಕ್ಷವಾಗಿಯೂ ಉಪಯೋಗ ಮಾಡಿತೋರಿಸಿದರು. ಇದಕ್ಕೆ ಆದೇಶ ಪಾಲಕ ನಂಬರ್ವನ್ ಮಗು ಎಂದು ಹೇಳಲಾಗುತ್ತದೆ ಏಕೆಂದರೆ ತಂದೆಯ ವಿಶೇಷ ಆದೇಶವೇನೆಂದರೆ- ನೆನಪು ಮತ್ತು ಸೇವೆಯಲ್ಲಿ ಸದಾ ತಂದೆಯ ಸಮಾನರಾಗಿರಿ ಎನ್ನುವುದೇ ಆಗಿದೆ. ಅಂದಮೇಲೆ ಆದಿಯಿಂದ ಅಂತಿಮ ಕ್ಷಣದವರೆಗೂ ಎರಡೂ ಆದೇಶಗಳನ್ನು ಪ್ರತ್ಯಕ್ಷದಲ್ಲಿ ನೋಡಿದಿರಲ್ಲವೇ? ಸ್ನೇಹದ ಗುರುತು ತಂದೆಯವರು ತಿಳಿಸಿರುವುದನ್ನು ಅನುಸರಿಸುವುದಾಗಿದೆ. ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ- ಆದಿಯಿಂದ ಅಂತ್ಯದವರೆಗೂ ಸರ್ವ ಖಜಾನೆಗಳನ್ನು ಸ್ವಯಂನ ಜೊತೆ-ಜೊತೆ ಸೇವೆಯಲ್ಲಿಯೂ ಉಪಯೋಗ ಮಾಡಿದ್ದೀರಾ? ತಂದೆಯ ಆದೇಶದಂತೆ ಒಂದು ಶ್ವಾಸ ಅಥವಾ ಸಂಕಲ್ಪ, ಸೆಕೆಂಡ್ ಸಹ ವ್ಯರ್ಥವಾಗಿ ಕಳೆಯಬಾರದು. ಅಂದಮೇಲೆ ಈ ಆದೇಶವನ್ನು ಇಡೀ ದಿನದಲ್ಲಿ ಪ್ರತ್ಯಕ್ಷದಲ್ಲಿ ಉಪಯೋಗಿಸಿದ್ದೀರಾ? ಅಥವಾ ಕೆಲವೊಮ್ಮೆ ಉಪಯೋಗಿಸಿದ್ದೀರಿ, ಕೆಲವೊಮ್ಮೆ ಉಪಯೋಗಿಸಿಲ್ಲವೇ? ಒಂದುವೇಳೆ ಕೆಲವೊಮ್ಮೆ ಆದೇಶಪಾಲಕರಾದರು ಮತ್ತು ಕೆಲವೊಮ್ಮೆ ಇಲ್ಲವೆಂದರೆ ಯಾವ ಪಟ್ಟಿಯಲ್ಲಿ ಇರುವಿರಿ? ಒಂದುವೇಳೆ ಬಾಪ್ದಾದಾರವರು

ತಮ್ಮನ್ನು ಆದೇಶಪಾಲಕನ ಪಟ್ಟಿಯಿಂದ ತೆಗೆದುಬಿಟ್ಟರೆ ಯಾವುದರಲ್ಲಿ ಇರುವಿರಿ? ತಮ್ಮನ್ನಂತು ತಿಳಿದುಕೊಂಡಿದ್ದೀರಿ ಅಲ್ಲವೇ? ಏಕೆಂದರೆ ತಾವೆಲ್ಲರೂ ಸರ್ವ ಖಜಾನೆಗಳ ನಿಮಿತ್ತರು, ಮಾಲೀಕರಿದ್ದೀರಿ ಆದ್ದರಿಂದ ಒಂದು ಸಂಕಲ್ಪವೂ ಸಹ ತಂದೆಯವರ ಆದೇಶವಿಲ್ಲದೆ ಉಪಯೋಗಿಸುವಂತಿಲ್ಲ. ಅಥವಾ ನಾವು ಬಾಲಕರಿಂದ ಮಾಲೀಕರಲ್ಲವೇ ಆದ್ದರಿಂದ ವ್ಯರ್ಥವಾಗಿ ಕಳೆಯಬಹುದು ಅಥವಾ ಏನಾದರೂ ಮಾಡಬಹುದು, ಇದರಲ್ಲಿ ತಂದೆಯವರದೇನು ಹೋಗುತ್ತದೆ ಎಂದು ಚಿಂತಿಸುತ್ತೀರಾ! ತಂದೆಯವರು ಕೊಟ್ಟಿದ್ದಾರೆ ಅಂದಮೇಲೆ ಈಗ ಲೆಕ್ಕವೇಕೆ ತೆಗೆದುಕೊಳ್ಳುವರು? ಈ ರೀತಿ ಅಲ್ಲ. ತಾವು ಪ್ರತಿನಿತ್ಯವೂ ತಂದೆಯವರ ಮುಂದೆ ಹೇಳುತ್ತೀರಿ- ಎಲ್ಲವೂ ತಮ್ಮದೇ ಆಗಿದೆ, ನನ್ನದಲ್ಲ, ಹೀಗೆ ಹೇಳುತ್ತೀರಲ್ಲವೆ! ಅಥವಾ ಸಮಯದಲ್ಲಿ ನನ್ನದು, ಬೇರೆ ಸಮಯದಲ್ಲಿ ನಿನ್ನದು ಎನ್ನುವಿರಾ! ಯಾವಾಗ ನಮಗೆ ಬೇಕಾಗಿರುವುದೋ ಆಗ ನನ್ನದೆನ್ನುವರೋ ಹಾಗೆಯೇ ನಿನ್ನದು.... ಇಂತಹ ಚತುರತೆಯಂತು ಮಾಡುವುದಿಲ್ಲ ಅಲ್ಲವೇ? ಬ್ರಹ್ಮಾ ತಂದೆಯವರನ್ನು ನೋಡಿದಿರಾ- ತಮ್ಮ ವಿಶ್ರಾಂತಿಯ ಸಮಯವನ್ನೂ ವಿಚಾರ ಸಾಗರ ಮಂಥನ ಮಾಡುತ್ತಾ ಮಕ್ಕಳಿಗಾಗಿ ಉಪಯೋಗಿಸಿದರು. ರಾತ್ರಿಯಲ್ಲಿಯೂ ಜಾಗೃತವಾಗಿದ್ದು ಮಕ್ಕಳಿಗಾಗಿ ಯೋಗದ ಶಕ್ತಿಯನ್ನು ಕೊಡುತ್ತಿದ್ದರು- ಈ ಚರಿತ್ರೆಯನ್ನಂತು ಕೇಳಿದ್ದೀರಲ್ಲವೇ? ಬ್ರಹ್ಮಾತಂದೆಯವರ ಚರಿತ್ರೆಯನ್ನು ಕೇಳಿದ್ದೀರಲ್ಲವೇ? ಕೇಳಿದ ನಂತರ ಅನುಸರಣೆ ಮಾಡಿದ್ದೀರಾ ಅಥವಾ ಕೇವಲ ಕೇಳಿಸಿಕೊಂಡಿರಾ? ಕೇಳುವುದು ಅರ್ಥಾತ್ ಅದನ್ನು ಮಾಡುವುದು.

ಹಾಗಾದರೆ ಮೂರನೇ ಹೆಜ್ಜೆ- ಸದಾ ಆಯಿತು ಪ್ರಭು, ಸದಾ ಪ್ರಭು ಹಾಜಿರ್ ಮತ್ತು ಜೊತೆಯಲ್ಲಿರುವುದು. ಬ್ರಹ್ಮಾ ತಂದೆಯವರಿಂದ ಶಿವತಂದೆಯು ಬೇರೆ ಆಗಲಿಲ್ಲ, ಜೊತೆ-ಜೊತೆಯಲ್ಲಿಯೇ ಇರುತ್ತಿದ್ದರಲ್ಲವೆ! ಮಕ್ಕಳು ಬಾಬಾ ಎಂದರು ಮತ್ತು ತಂದೆಯವರು ಮಧುರ ಮಗು ಎಂದರು. ಹಾಗಾದರೆ ಮನಸ್ಸಿನ ಸ್ಥಿತಿಯಲ್ಲಿ ಸದಾ ಹಾಜಿರ್ ಮತ್ತು ಜೊತೆಯ ಅನುಭವ ಮಾಡಿದರು, ಸೇವೆಯಲ್ಲಿಯೂ ಸದಾ ಆಯಿತು ಪ್ರಭು ಎಂದರು. ಭಲೆ ರಾತ್ರಿಯಲ್ಲಾಗಲಿ, ಹಗಲಲ್ಲಾಗಲಿ, ಸೇವೆಯ ನಿರ್ದೇಶನ ಸಿಕ್ಕಿತು ಮತ್ತು ಪ್ರತ್ಯಕ್ಷದಲ್ಲಿ ಮಾಡಿಬಿಟ್ಟರು ಮತ್ತು ಕರ್ಮದಲ್ಲಿ ಸದಾ ಆಯಿತೆಂದರು. ಆಯಿತು ಎನ್ನುವುದನ್ನು ಕಲಿಸಿದರಲ್ಲವೇ? ಹಾಗಾದರೆ ತಾವೇನು ಅನುಸರಿಸುತ್ತೀರಿ? ಕೆಲವೊಮ್ಮೆ ಆಯಿತು, ಕೆಲವೊಮ್ಮೆ ಇಲ್ಲವೆನ್ನುವುದಿಲ್ಲ ಅಲ್ಲವೇ? ಪ್ರೀತಿಯ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಿರಿ. ಬಾಬಾರವರೊಂದಿಗೆ ನನಗೆಷ್ಟು ಪ್ರೀತಿಯಿದೆಯೋ ಅಷ್ಟು ಮತ್ಯಾರಿಗೂ ಇಲ್ಲ ಎಂದು ಯೋಚಿಸುವುದಿಲ್ಲವೆ! ನನ್ನ ಹೃದಯದಲ್ಲಿ ನೋಡಿ, ಏನು ತೋರಿಸಲಿ, ಏನು ಹೇಳಲಿ...... ಮಕ್ಕಳು ಇಂತಹ ಹಾಡನ್ನೂ ಹಾಡುತ್ತಾರೆ ಆದರೆ ಪ್ರತ್ಯಕ್ಷ ಪ್ರಮಾಣ ತೋರಿಸಬೇಕು. ಅದರ ಪ್ರತ್ಯಕ್ಷ ಪ್ರಮಾಣವಾಗಿದೆ- ಫಾಲೋ ಫಾದರ್(ಬ್ರಹ್ಮಾ ತಂದೆಯವರನ್ನು ಅನುಸರಿಸುವುದು) ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ- ನನ್ನ ಸ್ಥಿತಿಯಲ್ಲಿ, ಸೇವೆಯಲ್ಲಿ, ಕರ್ಮ ಅರ್ಥಾತ್ ಸಂಬಂಧ-ಸಂಪರ್ಕದಲ್ಲಿ ಬರುವುದು, ಮೂರರಲ್ಲಿಯೂ ಸದಾ ಫಾಲೋ ಫಾದರ್ ಮಾಡುತ್ತಿದ್ದೇನೆಯೇ? ಪ್ರತೀ ಆದೇಶವನ್ನು ಕೇವಲ ಬುದ್ಧಿಯವರೆಗಷ್ಟೇ ಇರುತ್ತದೇ ಅಥವಾ ಕರ್ಮದಲ್ಲಿಯೂ ಬರುತ್ತದೆಯೇ? ಫಲಿತಾಂಶದಲ್ಲಿ ನೋಡಲಾಯಿತು- ಒಂದುವೇಳೆ ಬುದ್ಧಿ ಹಾಗೂ ವಾಣಿಯಲ್ಲಿ 100 ಮಾತುಗಳಿದ್ದರೆ ಕರ್ಮದಲ್ಲಿ 50 ಅಷ್ಟೇ ಇರುತ್ತದೆ ಹಾಗಾದರೆ ಅಂತಹವರನ್ನು ಫಾಲೋ ಫಾದರ್ ಮಾಡುವವರೆಂದು ಹೇಳುವುದೇ? ಅಪೂರ್ಣ ಫಲಿತಾಂಶವುಳ್ಳವರನ್ನು ಫಾಲೋ ಫಾದರ್ನ ಪಟ್ಟಿಯಲ್ಲಿಡಬೇಕಾ? ತಾವೇನು ತಿಳಿಯುತ್ತೀರಿ? ಅಂತಹವರು ಆದೇಶ ಪಾಲಕರೇ? ಅಥವಾ ತಾವು ಅಪೂರ್ಣತೆಯಲ್ಲಿಯೇ ಖುಷಿಯಾಗಿದ್ದೀರಾ? ಅಲ್ಪ-ಸ್ವಲ್ಪ ಅಂತರವಿದ್ದರೆ ಇಷ್ಟವಾಗುವುದೇ! ಆರಂಭದ ದಿನಗಳಲ್ಲಿ ಮಾಲೆಯನ್ನೂ ಮಾಡುತ್ತಿದ್ದರು, ಗೋಲ್ಡನ್-ಸಿಲ್ವರ್ ಸಹ ಲಿಸ್ಟ್ ಮಾಡುತ್ತಿದ್ದರು. ಹಾಗಾದರೆ ಈಗ ಯಾವ ಪಟ್ಟಿಯನ್ನು ಮಾಡುವುದು? ಅಥವಾ ಸಿಲ್ವರ್ನಲ್ಲಿ ಹೆಸರನ್ನು ನೋಡಿ ಕಾಪರ್ ಆಗಿಬಿಡುವಿರಾ?

ತಂದೆಯವರಂತು ಸಮಯದ ಸೂಚನೆಯನ್ನು ಕೊಡುತ್ತಾ ಬಂದಿದ್ದಾರೆ ಆದರೆ ಪ್ರಕೃತಿಯೂ ಕೊಡುತ್ತಿದೆ. ಪ್ರಕೃತಿಯೂ ಚಾಲೆಂಜ್ ಮಾಡುತ್ತಿದೆ ಅಂದಮೇಲೆ ಸಮಯದನುಸರ ತಾವು ಅನ್ಯರಿಗೂ ಸೂಚನೆಯನ್ನು ಕೊಡುತ್ತಾ ಇರುತ್ತೀರಿ. ಭಾಷಣದಲ್ಲಿ ಎಲ್ಲರಿಗೂ ಹೇಳುತ್ತೀರಿ- ಸಮಯ ಬಂದುಬಿಟ್ಟಿದೆ, ಸಮಯ ಬಂದುಬಿಟ್ಟಿದೆ ಹಾಗಾದರೆ ತಮಗೂ ಹೇಳಿಕೊಳ್ಳುತ್ತೀರಾ ಅಥವಾ ಅನ್ಯರಿಗಷ್ಟೇ ಹೇಳುವಿರಾ? ಅನ್ಯರಿಗೆ ಹೇಳುವುದಂತು ಸಹಜವೆನಿಸುತ್ತದೆ ಅಲ್ಲವೇ? ಹಾಗಾದರೆ ಈ ಚಾಲೆಂಜ್ನ ಸ್ಮೃತಿಯನ್ನು ತಮ್ಮಲ್ಲಿಯೂ ತಂದುಕೊಳ್ಳಿರಿ. ಸಮಯದನುಸಾರ ತಮ್ಮ ಪುರುಷಾರ್ಥದ ಗತಿಯೇನಾಗಿದೆ? ಬಾಪ್ದಾದಾರವರು ಒಂದು ಮಾತಿನಲ್ಲಿ ಒಳಗಿಂದೊಳಗೆ ನಗುತ್ತಿರುತ್ತಾರೆ. ಯಾವ ಮಾತಿನಲ್ಲಿ ಎನ್ನುವುದು ಗೊತ್ತಿದೆಯೇ? ಒಂದುಕಡೆ ಮೆಜಾರಿಟಿ ಮಕ್ಕಳು ಕೆಲಕೆಲವೊಮ್ಮೆ ಒಂದು ಸೆಕೆಂಡಿನಲ್ಲಿ ಯೋಚಿಸುತ್ತಾರೆ- ಸಮಯದನುಸಾರ ಪುರುಷಾರ್ಥದಲ್ಲಿ ತೀವ್ರತೆಯನ್ನು ತರಬೇಕು, ಮತ್ತೊಂದು ಕಡೆ ಯಾವಾಗ ಮಾಯೆಯು ತನ್ನ ಪ್ರಭಾವ ಬೀರುತ್ತದೆಯೋ ಆಗ ಇನ್ನೊಂದು ಸೆಕೆಂಡಿನಲ್ಲಿ- ಇದೆಲ್ಲವೂ ನಡೆಯುತ್ತಿರುತ್ತದೆ, ಇದಂತು ಮಹಾರಥಿಗಳ ಸಮಯದಿಂದಲೂ ಪರಂಪರೆಯಾಗಿ ನಡೆಯುತ್ತದೆ ಬಂದಿದೆ ಎಂದು ತಿಳಿಯುತ್ತಾರೆ. ಆಗ ಬಾಪ್ದಾದಾರವರು ಏನು ಮಾಡುವರು? ಕೋಪವನ್ನಂತು ಮಾಡಿಕೊಳ್ಳುವುದಿಲ್ಲ ಅಲ್ಲವೆ, ನಗುವರು. ಹಾಗೂ ಇದಕ್ಕೆ ವಿಶೇಷ ಕಾರಣವೇನೆಂದರೆ- ಸಮಯ-ಪ್ರತಿ ಸಮಯದಲ್ಲಿ ಪುರುಷಾರ್ಥವನ್ನು ಬಹಳ ಸಹಜ ಮಾಡಿಕೊಟಿದ್ದಾರೆ, ಸಹಜ ಮಾಡಿಕೊಂಡಿದ್ದೀರಿ. ಸ್ವಭಾವವನ್ನು ಸರಳ ಸ್ವಭಾವವನ್ನಾಗಿ ಮಾಡಿಕೊಳ್ಳುವುದಿಲ್ಲ, ಇನ್ನೂ ಬಿಗಿಯಾಗಿರುತ್ತಾರೆ (ಹಳೆಯದರಿಂದ ಮುಕ್ತರಾಗಿರದೇ ಇರುವುದು) ಮತ್ತು ಪುರುಷಾರ್ಥದಲ್ಲಿ ಸಹಜವಾಗಿ ಇದ್ದುಬಿಡುತ್ತಾರೆ. ನಂತರ ಯೋಚಿಸುತ್ತಾರೆ- ಸಹಜ

ಯೋಗವಲ್ಲವೆ ಆದರೆ ಜೀವನದಲ್ಲಿ, ಪುರುಷಾರ್ಥದಲ್ಲಿ ಸಹಜವಾಗಿರುವುದಕ್ಕೆ ಸಹಜ ಯೋಗ ಎಂದು ಹೇಳುವುದಿಲ್ಲ. ಏಕೆಂದರೆ ಸಹಜವಾಗಿರುವುದರಿಂದ ಶಕ್ತಿಗಳು ಮರ್ಜ್ (ಗುಪ್ತ) ಆಗಿಬಿಡುತ್ತದೆ, ಪ್ರತ್ಯಕ್ಷವಾಗಿ ಇರುವುದಿಲ್ಲ. ತಾವೆಲ್ಲರೂ ತಮ್ಮ ಬ್ರಾಹ್ಮಣ ಜೀವನದ ಆದಿಯ ಸಮಯವನ್ನು ನೆನಪು ಮಾಡಿಕೊಳ್ಳಿರಿ. ಆ ಸಮಯದ ಪುರುಷಾರ್ಥವು ಹೇಗಿತ್ತು? ಸಹಜ ಪುರುಷಾರ್ಥವಾಗಿತ್ತೆ ಅಥವಾ ಗಮನವಿಡುವ ಪುರುಷಾರ್ಥವಾಗಿತ್ತೇ? ಗಮನವಿಡುವುದಾಗಿತ್ತು, ಒಲವು-ಉತ್ಸಾಹ ತುಂಬಿರುವ ಪುರುಷಾರ್ಥವಿತ್ತು ಮತ್ತು ಈಗ ಹುಡುಗಾಟಿಕೆಯ ಮೆತ್ತನೆಯ ದಿಂಬು ಹಾಗೂ ಹಾಸಿಗೆಯು ಸಿಕ್ಕಿಬಿಟ್ಟಿದೆ. ಸಾಧನಗಳು ಹೆಚ್ಚಾಗಿ ವಿಶ್ರಾಂತಿ ಪ್ರಿಯರನ್ನಾಗಿ ಮಾಡಿಬಿಟ್ಟಿದೆ. ಹಾಗಾದರೆ ತಮ್ಮ ಆದಿಯ ಪುರುಷಾರ್ಥ, ಆದಿಯ ಸೇವೆ ಹಾಗೂ ಆದಿಯ ಒಲವು-ಉತ್ಸಾಹವನ್ನು ಪರಿಶೀಲನೆ ಮಾಡಿಕೊಳ್ಳಿರಿ- ಏನಿತ್ತು? ವಿಶ್ರಾಂತಿ ಪ್ರಿಯರಾಗಿದ್ದಿರಾ? (ಇಲ್ಲ) ಮತ್ತು ಈಗಾದರೂ ಸ್ವಲ್ಪ-ಸ್ವಲ್ಪ ಇದೆಯೇ? ಸಾಧನಗಳು ಸೇವೆಗಾಗಿ ಸಿಕ್ಕಿದೆ, ಅದನ್ನು ತಮ್ಮ ವಿಶ್ರಾಂತಿ ಪ್ರಿಯರನ್ನಾಗಿ ಮಾಡುವುದಕ್ಕಾಗಿ ಅಲ್ಲ. ಹಾಗಾದರೆ ಈಗ ಮೆತ್ತನೆಯ ದಿಂಬು-ಹಾಸಿಗೆಯನ್ನು ತೆಗೆದೆಸಿಯಿರಿ. ಪಟ್ಟದ ರಾಣಿಯರಾಗಿರಿ, ಪಟ್ಟದ ರಾಜರಾಗಿರಿ. ಭಲೆ ಮಂಚದ ಮೇಲೆ ಮಲಗಿರಿ ಆದರೆ ಸ್ಥಿತಿಯು ಪಟ್ಟದ ರಾಣಿ-ರಾಜರಾಗಿರುವುದೇ ಇರಲಿ. ಆದಿ ಸೇವೆಯ ಸಮಯದಲ್ಲಿ ಸಾಧನಗಳಿರಲಿಲ್ಲ ಆದರೆ ಸಾಧನೆಯು ಎಷ್ಟೊಂದು ಶ್ರೇಷ್ಠವಾಗಿತ್ತು. ಆ ಆದಿ ಸಾಧನೆಯಿಂದಲೇ ಇಷ್ಟೆಲ್ಲಾ ವೃದ್ಧಿಯನ್ನು ಮಾಡಿದೆ. ಹಾಗಾದರೆ ಸಾಧನೆಯ ಬೀಜವನ್ನು ವಿಸ್ತಾರದಲ್ಲಿ ಗುಪ್ತ ಮಾಡಿಬಿಡಬಾರದು. ಯಾವಾಗ ವಿಸ್ತಾರವಾಗುವುದೋ ಅಗ ಬೀಜವು ಗುಪ್ತವಾಗಿಬಿಡುತ್ತದೆ, ಸಾಧನೆಯು ಬೀಜವಾಗಿದೆ, ಸಾಧನವು ವಿಸ್ತಾರವಾಗಿದೆ. ಸಾಧನೆಯ ಬೀಜವನ್ನು ಗುಪ್ತವಾಗಲು ಬಿಡಬಾರದು, ಈಗ ಪುನಃ ಬೀಜವನ್ನು ಪ್ರತ್ಯಕ್ಷಗೊಳಿಸಿರಿ.

ಬಾಪ್ದಾದಾರವರು ಈ ಸೀಜನ್ನಿನಲ್ಲಿ ಕಾರ್ಯವನ್ನು ಕೊಟ್ಟಿದ್ದರು ಆದರೆ ಮಾಡಿಲ್ಲ. ಏನನ್ನು ಕೊಟ್ಟಿದ್ದರೆಂದು ನೆನಪಿದೆಯೇ? ಅಥವಾ ಬರವಣಿಗೆಯಿರುವ ಕಾಪಿಯಲ್ಲಿದೆಯೇ. ಈ ಕಾರ್ಯವನ್ನು ಕೊಟ್ಟಿದ್ದರು- ಬೇಹದ್ದಿನ ವೈರಾಗ್ಯ ವೃತ್ತಿಯ ಬಗ್ಗೆ ತಮ್ಮೊಂದಿಗೂ ಚರ್ಚೆ ಮಾಡಿರಿ ಹಾಗೂ ಪರಸ್ಪರದಲ್ಲಿಯೂ ಚರ್ಚೆ ಮಾಡಿರಿ ಹಾಗೂ ಪ್ರತ್ಯಕ್ಷದಲ್ಲಿಯೂ ಈ ಸಾಧನೆಯ ಬೀಜವನ್ನು ಪ್ರತ್ಯಕ್ಷಗೊಳಿಸಿರಿ. ಇದನ್ನು ಮಾಡಿದಿರಾ? ಅಥವಾ ಕೇವಲ ಒಂದು ದಿನ ಚರ್ಚೆ ಮಾಡಿದಿರಿ, ವರ್ಕ್ಶಾಪ್ ಆಯಿತು ಆದರೆ ವರ್ಕ್(ಕಾರ್ಯದಲ್ಲಿ)ನಲ್ಲಂತು ಬಂದಿಲ್ಲ. ಹಾಗಾದರೆ ವರ್ತಮಾನ ಸಮಯದನುಸರ ಈಗ ತಮ್ಮ ಸೇವೆ ಅಥವಾ ಸೇವಾಸ್ಥಾನಗಳ ದಿನಚರಿಯಲ್ಲಿ ಬೇಹದ್ದಿನ ವೈರಾಗ್ಯ ವೃತ್ತಿಯನ್ನಾಗಿ ಮಾಡಿರಿ. ಈಗ ಆರಾಮದ ದಿನಚರಿಯು ಸೇರಿಬಿಟ್ಟಿದೆ. ಈ ಹುಡುಗಾಟಿಕೆಯೂ ಶರೀರದ ಚಿಕ್ಕಪುಟ್ಟ ರೋಗಗಳ ನೆಪವನ್ನೂ ಮಾಡುತ್ತಿರುತ್ತದೆ. ಮುಂಚೆ ಇಂತಹ ರೋಗಗಳಿತ್ತಲ್ಲವೆ, ಆದರೆ ಸೇವೆಯ ಒಲವು ರೋಗಗಳನ್ನೂ ಗುಪ್ತ ಮಾಡಿಬಿಡುತ್ತದೆ. ಯಾವಾಗ ಯಾವುದೇ ಕಾರ್ಯವು ತಮಗೆ ಇಷ್ಟವಾಗಿರುವುದು ಇರುತ್ತದೆಯೆಂದರೆ ರೋಗದ ನೆನಪು ಬರುತ್ತದೆಯೇ? ಒಂದುವೇಳೆ ತಮ್ಮ ನಿಮಿತ್ತ ಸಹೋದರಿಯು ಹೇಳುತ್ತಾರೆ- ಬೇಡ, ನಿಮಗೆ ಆರೋಗ್ಯವು ಸರಿಯಾಗಿಲ್ಲ, ಅನ್ಯರನ್ನು ಮಾಡಲು ಬಿಡಿ ಎಂದರೆ ಮಾಡಲು ಬಿಡುವಿರಾ? ಆ ಸಮಯದಲ್ಲಿ ಜ್ವರ ಅಥವಾ ತಲೆ ನೋವಿದ್ದರೂ ಎಲ್ಲಿಗೆ ಹೊರಟುಹೋಗುತ್ತದೆ? ಮತ್ತೆ ಯಾವಾಗ ಸೇವೆಯೇನಾದರೂ ಇಷ್ಟವಿಲ್ಲದಿದ್ದರೆ ಏನಾಗುತ್ತದೆ? ತಲೆ ನೋವೂ ಬಂದುಬಿಡುತ್ತದೆ, ಹೊಟ್ಟೆ ನೋವೂ ಬಂದುಬಿಡುತ್ತದೆ. ಮುಂಚೆಯೇ ತಿಳಿಸಿದೆವಲ್ಲವೆ- ಒಂದುವೇಳೆ ನೆಪ ಮಾಡುವುದರಲ್ಲೇನಾದರೂ ಜ್ವರ ಎಂದು ಹೇಳುತ್ತೀರೆಂದರೆ ಶಿಕ್ಷಕನು ಹೇಳುತ್ತಾರೆ- ಥರ್ಮಾ ಮೀಟರ್ ಇಡಿ, ಆದರೆ ಹೊಟ್ಟೆನೋವು, ತಲೆ ನೋವಿಗಂತು ಥರ್ಮಾ ಮೀಟರ್ ಇಲ್ಲವಲ್ಲವೆ! ಮೂಡ್ ಸರಿಯಾಗಿಲ್ಲದಿದ್ದರೆ ಹೇಳುತ್ತಾರೆ- ಹೊಟ್ಟೆ ನೋವಿದೆ, ಇದು ಹುಡುಗಾಟಿಕೆಯ ನೆಪವಾಗಿದೆ. ಹಾಗಾದರೆ ಬೇಹದ್ದಿನ ವೈರಾಗ್ಯ ವೃತ್ತಿಯು ಗುಪ್ತವಾಗಿದೆಯೇ ಅಥವಾ ನೆಪಗಳನ್ನು ಮಾಡುವುದು ಇಮರ್ಜ್ ಆಗಿಬಿಟ್ಟಿದೆ.

ಬಾಪ್ದಾದಾರವರು ನೋಡುತ್ತಿದ್ದರು- ಎಲ್ಲಾ ಮಕ್ಕಳು ಬಹಳ ಸ್ನೇಹದಿಂದ ಮಧುಬನದಲ್ಲಿ ತಲುಪಿದ್ದಾರೆ. ಇದರಲ್ಲಿ ಸ್ನೇಹವಂತು ಕಾಣಿಸಿತು ಅದಕ್ಕಾಗಿ ಶುಭಾಷಯಗಳು. ಬಾಪ್ದಾದಾರವರಿಗೂ ಮಕ್ಕಳ ಖುಷಿಯನ್ನು ನೋಡಿ ಖುಷಿಯಾಗುತ್ತದೆ ಆದರೆ ಮುಂದೆ ಏನು ಮಾಡಬೇಕು? ಕೇವಲ ಮಧುಬನದವರೆಗೆ ತಲುಪುವುದೇ ಅಥವಾ ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವುದಕ್ಕಾಗಿ ಫರಿಶ್ತಾ ರೂಪದಲ್ಲಿ ವತನದಲ್ಲಿ ತಲುಪುವುದೇ? ಏನು ಮಾಡಬೇಕು? ಮಧುಬನದಲ್ಲಿ ತಲುಪಿರುವುದಕ್ಕಾಗಿ ಶುಭಾಷಯಗಳು ಆದರೆ ಫರಿಶ್ತೆಯಾಗಿ ವತನದಲ್ಲಿ ಯಾವಾಗ ತಲುಪಿವಿರಿ? ಎಲ್ಲರಿಗೂ ತಾವು ನಡೆಯುತ್ತಾ-ಸುತ್ತಾಡುತ್ತಾ ಫರಿಶ್ತೆಯಾಗಿ ಕಾಣಿಸಬೇಕು. ಮಾತು-ಚಲನೆ, ಇರುವುದೆಲ್ಲವೂ ಫರಿಶ್ತೆಯಾಗಿಬಿಡಬೇಕು. ಮತ್ತು ಫರಿಶ್ತೆಯ ಅರ್ಥವೇನೆಂದರೆ- ಡಬಲ್ ಲೈಟ್. ಹಾಗಾದರೆ ದಿನಚರಿಯಲ್ಲಿ ಲೈಟ್ ಆಗಿರಬಾರದು ಆದರೆ ಸಂಬಂಧ-ಸಂಪರ್ಕದಲ್ಲಿ, ಸ್ಥಿತಿಯಲ್ಲಿ ಸಹಜವಾಗಿರಬೇಕು (ಹಗುರವಾಗಿರಬೇಕು). ಹಾಗಾದರೆ ಲೈಟ್ ಆಗಿರುವುದು ಬರುತ್ತದೆಯೇ ಅಥವಾ ಹೊರೆಯೇ ಸೆಳೆಯುತ್ತಿರುತ್ತದೆಯೇ? ಬಾಪ್ದಾದಾರವರು ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ನೋಡಲು ಬಯಸುತ್ತಾರೆ ಮತ್ತು ಯಾವಾಗ ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ಕೊಡುತ್ತಾರೆಯೋ ಆಗ ತಮಗೂ ಚಪ್ಪಾಳೆಯನ್ನು ಹಾಕುವ ಅವಶ್ಯಕತೆಯಿರುವುದಿಲ್ಲ ಆದರೆ ಮಾಯೆ, ಪ್ರಕೃತಿ ಎಲ್ಲವೂ ಚಪ್ಪಾಳೆ ಹಾಕುವರು. ಮಾಯೆಯೂ ಸಹ ವಾಹ್ ವಿಜಯಿಗಳೇ ವಾಹ್! ಎಂದು ಚಪ್ಪಾಳೆಯನ್ನು ಹಾಕುವುದು, ಪ್ರಕೃತಿಯೂ ಸಹ ಮಾಡುತ್ತದೆ. ಹಾಗಾದರೆ ಈಗ ಸ್ವಲ್ಪ ಪರಿವರ್ತನೆ ಮಾಡಿಕೊಳ್ಳಿರಿ.

ಈಗ ತಮ್ಮನ್ನು ಸ್ನೇಹದ ಜೊತೆ ಶಕ್ತಿಶಾಲಿ ಮಾಡಿಕೊಳ್ಳಿರಿ. ತಮ್ಮನ್ನು ಪರಿವರ್ತನೆಯಲ್ಲಿ ಶಕ್ತಿಸ್ವರೂಪರಾಗಿರಿ. ಸಹಜಯೋಗಿ, ಸಹಜಯೋಗಿ ಎಂದು ಹೇಳಿ-ಹೇಳಿ ಹುಡುಗಾಟಿಕೆಯಲ್ಲಿ ತಂದುಕೊಳ್ಳಬಾರದು. ಬಾಪ್ದಾದಾರವರು ನೋಡುತ್ತಿದ್ದಾರೆ- ಸ್ವಯಂ ಬಗ್ಗೆ, ಸೇವೆಯ ಬಗ್ಗೆಯಾಗಿರಲಿ, ನಾಲ್ಕೂ ಕಡೆಯ ಸಂಬಂಧ-ಸಂಪರ್ಕದ ಬಗ್ಗೆ ಹುಡುಗಾಟಿಕೆಯು ಹೆಚ್ಚಾಗಿಬಿಟ್ಟಿದೆ, ಇದೆಲ್ಲವೂ ನಡೆಯುತ್ತಿರುತ್ತದೆ ಎಂದು ಯೋಚಿಸಬಾರದು. ಒಬ್ಬರು ಇನ್ನೊಬ್ಬರನ್ನು ಇದರಲ್ಲಿ ಕಾಪಿ ಮಾಡಬಾರದು, ತಂದೆಯವರನ್ನು ಕಾಪಿ ಮಾಡಿರಿ. ಅನ್ಯರನ್ನು ನೋಡುವಂತಹ ಹವ್ಯಾಸವು ಸ್ವಲ್ಪ ಹೆಚ್ಚಾಗಿಬಿಟ್ಟಿದೆ, ತಮ್ಮನ್ನು ನೋಡಿಕೊಳ್ಳುವುದರಲ್ಲಿ ಹುಡುಗಾಟಿಕೆ ಬಂದುಬಿಟ್ಟಿದೆ. ಬಾಪ್ದಾದಾರವರು ತಿಳಿಸಿದ್ದರಲ್ಲವೇ- ಸಮೀಪ ದೃಷ್ಟಿಯು ಬಲಹೀನವಾಗಿಬಿಟ್ಟಿದೆ, ದೂರ ದೃಷ್ಟಿಯು ತೀಕ್ಷ್ಣವಾಗಿಬಿಟ್ಟಿದೆ, ಈಗೇನು ಮಾಡುವಿರಿ? ಸೀಜûನ್ನಿನ ಫಲವೇನು ಕೊಡುತ್ತೀರಿ? ಕೇವಲ ಬಾಬಾ ಬಂದರು, ಭೇಟಿಯಾದರು, ಆಚರಿಸಿದೆವು, ಮುರುಳಿ ಕೇಳಿದೆವು- ಇದೇ ಫಲವಾಗಿದೆಯೇ? ಪ್ರತೀ ಸೀಜûನ್ನಿನ ಫಲವಿರುತ್ತದೆಯಲ್ಲವೇ? ಹಾಗಾದರೆ ಈ ಸೀಜûನ್ನಿನ ಫಲವಾಗಿ ಬಾಪ್ದಾದಾರವರಿಗೆ ಭೋಗವನ್ನೇನು ಇಡುವಿರಿ? ಭೋಗವನ್ನಿಡುತ್ತೀರೆಂದರೆ ಫಲವನ್ನೂ ಇಡುತ್ತೀರಲ್ಲವೇ? ಆ ಫಲವಂತು ಬಜಾರಿನಲ್ಲಿ ಸಿಕ್ಕಿಬಿಡುತ್ತದೆ, ಅದೇನು ದೊಡ್ಡ ಮಾತಲ್ಲ. ಈಗ ಈ ಸೀಜನ್ನಿನ ಫಲವನ್ನೇನು ಕೊಡುಗೆಯಾಗಿ ಇಡುವಿರಾ ಅಥವಾ ಭೋಗವನ್ನು ಇಡುವಿರಾ? ಇಡುತ್ತೀರಾ ಅಥವಾ ಕಷ್ಟವೇ? ಹಾಗಾದರೆ ನಂಬರ್ವನ್ ಭೋಗವು ಎಲ್ಲಿಂದ ಬರುತ್ತದೆ ಎಂಬುದನ್ನು ನೋಡೋಣ! ಪ್ರತಿಜ್ಞೆಯನ್ನಂತು ಬಹಳ ಒಳ್ಳೆಯದನ್ನೇ ಮಾಡಿ ಹೋಗುತ್ತೀರಿ, ಎಂದೂ ಇಲ್ಲವೆಂದು ಹೇಳುವುದಿಲ್ಲ, ಹೌದು-ಹೌದು ಎನ್ನುತ್ತೀರಿ, ಖುಷಿ ಪಡಿಸಿಬಿಡುತ್ತೀರಿ! ಆದರೆ ಈಗೇನು ಮಾಡುವಿರಿ? ನಿಮಿತ್ತ ಶಿಕ್ಷಕಿಯರು ನಂಬರ್ವನ್ ಭೋಗವನ್ನು ಇಡುವಿರಲ್ಲವೇ? ಎಲ್ಲಾ ಸೇವಾಕೇಂದ್ರದ ಭೋಗವನ್ನು ನೋಡುತ್ತೇವೆ. ಪ್ರವೃತ್ತಿಯವರೂ ಸಹ ಭೋಗವನ್ನು ಇಡುತ್ತೀರಲ್ಲವೆ ಅಥವಾ ತಾವೇ ಸ್ವೀಕರಿಸಿಬಿಡುತ್ತೀರಾ? ಇದಂತು ಸೇವಾಕೇಂದ್ರದವರ ಕಾರ್ಯವಾಗಿದೆ ಎಂದು ಯೋಚಿಸಬಾರದು. ಇದು ಎಲ್ಲರ ಕಾರ್ಯವಾಗಿದೆ. ಹಾಗಾದರೆ ಆದೇಶ ಪಾಲಕನಾಗುವ ಹೆಜ್ಜೆಯನ್ನು ಪ್ರತ್ಯಕ್ಷದಲ್ಲಿ ತರಬೇಕಾಗಿದೆ.

ನಾಲ್ಕನೇ ಹೆಜ್ಜೆಯಾಗಿದೆ- ವಿಧೇಯ. ಎಂದೂ ಮನಸ್ಸಿನಿಂದ, ಬುದ್ಧಿಯಿಂದ, ಸಂಕಲ್ಪದಿಂದಲೂ ತಂದೆಯವರ ವಿಶ್ವಾಸದ್ರೋಹಿ (ಅವಿಧೇಯ) ಆಗಬಾರದು. ವಿಧೇಯನ ಅರ್ಥ- ಸದಾ ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ. ಸಂಕಲ್ಪದಲ್ಲಿಯೂ ದೇಹ, ದೇಹದ ಸಂಬಂಧ, ದೇಹದ ಪದಾರ್ಥ ಅಥವಾ ದೇಹವುಳ್ಳ ವ್ಯಕ್ತಿಯು ಆಕರ್ಷಿಸಬಾರದು. ಹೇಗೆ ಯಾವಾಗ ಪತಿ-ಪತ್ನಿ ಒಬ್ಬರಿನ್ನೊಬ್ಬರಿಗೆ ವಿಧೇಯನಾಗಿರುತ್ತಾರೆ, ಸ್ವಪ್ನದಲ್ಲೇನಾದರೂ ಅನ್ಯರ ನೆನಪು ಬಂದಿತೆಂದರೆ ವಿಧೇಯನೆಂದು ಹೇಳುವುದಿಲ್ಲ. ಅದರಲ್ಲಿ ಬ್ರಹ್ಮಾ ತಂದೆಯವರನ್ನು ನೋಡಿದಿರಿ- ಸಂಕಲ್ಪದಲ್ಲಿಯೂ ಇನ್ನೊಂದು ಕಡೆಯಿರಲಿಲ್ಲ. ಒಬ್ಬ ಬಾಬಾರವರೇ ಸರ್ವಸ್ವವಾಗಿದ್ದರು, ಇದಕ್ಕೇ ವಿಧೇಯನೆಂದು ಹೇಳಲಾಗುತ್ತದೆ. ಒಂದುವೇಳೆ ಪದಾರ್ಥದಲ್ಲಾದರೂ ಆಕರ್ಷಣೆಯಿದೆ, ಸಾಧನಗಳಲ್ಲಿ ಆಕರ್ಷಣೆ ಇದ್ದರೂ ಸಹ ತಮ್ಮ ಸಾಧನೆಯು ಖಂಡಿತವಾಗಿಬಿಡುತ್ತದೆ, ವಿಧೇಯತೆಯ ಖಂಡನೆಯಾಗಿಬಿಡುತ್ತದೆ. ಮತ್ತು ಖಂಡಿತವಾಗಿರುವ ಯಾವುದೇ ವಸ್ತುವು ಸಂಪನ್ನ, ಪೂಜ್ಯನೆಂಬ ಮಹಿಮೆಯಾಗುವುದಿಲ್ಲ. ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ- ಸಂಕಲ್ಪದಲ್ಲಾದರೂ ಯಾವುದೇ ಆಕರ್ಷಣೆಯು ಅವಿಧೇಯನನ್ನಾಗಿ ಮಾಡುವುದಿಲ್ಲವೇ? ಒಂದುವೇಳೆ ಸ್ವಲ್ಪವೇನಾದರೂ ಯಾವುದರ ಬಗ್ಗೆಯಾದರೂ ವಿಶೇಷ ಆಕರ್ಷಣೆಯಿದೆ, ಸ್ವಲ್ಪವಾದರೂ ವ್ಯಕ್ತಿಗತ ರೂಪದಲ್ಲಿ ಬಾಗುತ್ತಿದ್ದೀರಿ, ಭಲೆ ಗುಣಗಳ ಬಗ್ಗೆ ಅಥವಾ ಸೇವೆಯಲ್ಲಿ, ಅಥವಾ ಒಳ್ಳೆಯ ಸಂಸ್ಕಾರದಲ್ಲಾದರೂ ವಿಶೇಷವಾಗಿ ಪ್ರಭಾವಿತರಾಗುತ್ತಿದ್ದರೆ ವಿಧೇಯನೆಂದು ಹೇಳುವುದಿಲ್ಲ. ಎಲ್ಲರ ವಿಶೇಷತೆ, ಬೇಹದ್ದಿನ ವಿಶೇಷತೆಯಲ್ಲಿ ಆಕರ್ಷಿಸುವುದು ಬೇರೆ ಮಾತು ಆದರೆ ಯಾವುದೇ ವಿಶೇಷ ವ್ಯಕ್ತಿ ಅಥವಾ ವೈಭವದಲ್ಲಿ ಆಕರ್ಷಿತರಾಗುತ್ತಿದ್ದೀರೆಂದರೆ ವಿಧೇಯನ ಪಟ್ಟಿಯಲ್ಲಿ ಖಂಡನೆ ಆಗಿರುವುದೆಂದು ಗಾಯನವಾಗುತ್ತದೆ. ಹಾಗಾದರೆ ಖಂಡನೆಯಾಗಿರುವ ಮೂರ್ತಿಯಂತು ಆಗಿಲ್ಲವೇ? ಪೂಜ್ಯರಾಗಿದ್ದೀರಾ? ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಎಲ್ಲಾದರೂ ವಿಶೇಷ ಆಕರ್ಷಣೆ ಅಥವಾ ಬಾಗುವಿಕೆಯಿಲ್ಲವೇ? ಸಂಕಲ್ಪದಲ್ಲಿಯೂ ಬಾಗುತ್ತಿಲ್ಲವೆ, ವಾಚಾ-ಕರ್ಮಣಾದ ಮಾತಂತು ಬಿಟ್ಟುಬಿಡಿ ಆದರೆ ಸಂಕಲ್ಪದಲ್ಲಾದರೂ ಇದ್ದರೆ ಖಂಡಿತವಾಗಿರುವ ಪಟ್ಟಿಯಲ್ಲಿ ಬಂದುಬಿಡುತ್ತೀರಿ. ಹಾಗಾದರೆ ಪರಿಶೀಲನೆ ಮಾಡಿಕೊಳ್ಳುವುದು ಬರುತ್ತದೆಯಲ್ಲವೇ? ಒಳ್ಳೆಯದು!

ನಾಲ್ಕೂಕಡೆಯಲ್ಲಿರುವ ಸ್ನೇಹದ ಪ್ರತ್ಯಕ್ಷ ಪ್ರಮಾಣ ಕೊಡುವಂತಹ, ಪ್ರತಿಯೊಂದು ಆದೇಶವನ್ನು ಸಂಕಲ್ಪ, ವಾಣಿ ಹಾಗೂ ಕರ್ಮದಲ್ಲಿ ತರುವಂತಾ, ಸದಾ ತಮ್ಮನ್ನು ತಂದೆಯ ಸಮಾನ ಸರಳ ಹಾಗೂ ಉದಾಹರಣಾ ಮೂರ್ತಿಯನ್ನಾಗಿ ಮಾಡಿಕೊಳ್ಳುವಂತಹ, ಬ್ರಹ್ಮಾ ತಂದೆಯವರ ಪ್ರತೀ ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡುವಂತಹ ಶಕ್ತಿಶಾಲಿ ತಂದೆಯ ಸಮಾನರಾಗುವ ಧೃಡ ಸಂಕಲ್ಪವುಳ್ಳ ಸರ್ವ ಮಕ್ಕಳಿಗೂ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಸಾಕ್ಷಿತನದ ಸ್ಥಿತಿಯ ಮೂಲಕ ಹೀರೊ ಪಾತ್ರವನ್ನು ಅಭಿನಯಿಸುವಂತಹ ಸಹಜ ಪುರುಷಾರ್ಥಿ ಭವ

ಸಾಕ್ಷಿತನದ ಸ್ಥಿತಿಯು ಡ್ರಾಮಾದಲ್ಲಿ ಹೀರೊ ಪಾತ್ರವನ್ನು ಅಭಿನಯಿಸುವುದರಲ್ಲಿ ಸಹಯೋಗಿಯನ್ನಾಗಿ ಮಾಡುತ್ತದೆ. ಒಂದುವೇಳೆ ಸಾಕ್ಷಿಯಾಗಿ ಇರದಿದ್ದರೆ ಹೀರೊ ಪಾತ್ರವನ್ನು ಅಭಿನಯಿಸಲು ಸಾಧ್ಯವಾಗುವುದಿಲ್ಲ. ಸಾಕ್ಷಿತನ ಅಂದರೆ ದೇಹದಿಂದ ಭಿನ್ನ, ಆತ್ಮನು ಮಾಲೀಕನ ಸ್ಥಿತಿಯಲ್ಲಿ ಸ್ಥಿತರಾಗಿರುವುದು. ದೇಹದಿಂದಲೂ ಸಾಕ್ಷಿ, ಮಾಲೀಕನಾಗಿರುವುದು. ಈ ದೇಹದಿಂದ ಕರ್ಮವನ್ನು ಮಾಡಿಸುವವರು- ಇಂತಹ ಸಾಕ್ಷಿ ಸ್ಥಿತಿಯೇ ಸಹಜ ಪುರುಷಾರ್ಥದ ಅನುಭವ ಮಾಡಿಸುತ್ತದೆ ಏಕೆಂದರೆ ಈ ಸ್ಥಿತಿಯಲ್ಲಿ ಯಾವುದೇ ಪ್ರಕಾರದ ವಿಘ್ನ ಅಥವಾ ಕಷ್ಟಗಳು

ಬರಲು ಸಾಧ್ಯವಿಲ್ಲ- ಇದು ಮೂಲ ಅಭ್ಯಾಸವಾಗಿದೆ. ಇದರಿಂದಲೇ ಅಂತ್ಯದಲ್ಲಿ ವಿಜಯಿಗಳಾಗುವಿರಿ.

ಸ್ಲೋಗನ್: ಸ್ಲೋಗನ್: ಫರಿಶ್ತೆಯಾಗಬೇಕು ಎಂದರೆ ತಮ್ಮ ಸರ್ವ ಸಂಬಂಧಗಳನ್ನು ಒಬ್ಬ ಪ್ರಭುವಿನ ಜೊತೆ ಜೋಡಣೆ ಮಾಡಿಬಿಡಿ.